# ಡಾ. ಎಚ್. ಎಮ್. ಚನ್ನಪ್ಪಗೋಳ

**ಸಹ ಪ್ರಧ್ಯಾಪಕ ಕನ್ನಡ ವಿಭಾಗ**

ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ (ಸ್ವಾಯತ್ತ)

ಹಳಗನ್ನಡ ಕಾವ್ಯಗಳು ಉಲ್ಲೇಖಿತ ಶಿಕ್ಷಾ ಪದ್ಧತಿ

**ಶಿಕ್ಷಾ ಪದ್ಧತಿ:**

ನ್ಯಾಯ ಪದ್ಧತಿಯ ಹಿನ್ನೆಲೆಯಲ್ಲಿ ಗಮನಿಸುವುದಾದರೆ ಅಪರಾಧಗಳನ್ನು ನಿಯಂತ್ರಿಸಲು ಶಿಕ್ಷೆ ಅವಶ್ಯಕ. ಅಪರಾಧಿಯನ್ನು ಶಿಕ್ಷಿಸದೇ ಬಿಟ್ಟಿದ್ದಾದರೆ ಅಪರಾಧ ಕೃತ್ಯಗಳು ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಅಪರಾಧಗಳಿಗೆ ತಕ್ಕಂತೆ ಶಿಕ್ಷೆ ವಿಧಿಸಬೇಕು. ರಾಜನು ದಂಡಾಧಿಕಾರಿ, ರಾಜ್ಯದ ಸುಭಿಕ್ಷೆಗಾಗಿ ಶಿಕ್ಷಿಸುವುದು ಅವಶ್ಯ ಎಂಬುದನ್ನು ಸ್ಮೃತಿಗಳಲ್ಲಿಯೂ ಉಲ್ಲೇಖಿಸಲಾಗಿದೆ. ಸಿಕ್ಷೆಗಳು ಕಾಲದಿಂದ ಕಾಲಕ್ಕೆ ಅಪರಾಧದಿಂದ ಅಪರಾಧಕ್ಕೆ ಭಿನ್ನವಾಗಿರುತ್ತವೆ. ಜೈನ ಚಂಪೂ ಕಾವ್ಯಗಳಲ್ಲಿನ ಶಿಕ್ಷೆಗಳ ಉಲ್ಲೇಖಗಳನ್ನು ನಾವಿಲ್ಲಿ ಅವಲೋಕಿಸಬಹುದು.

ದಂಡನೆಯ ಸಂದರ್ಭದಲ್ಲಿ ಯಾವ ಅಪರಾಧಕ್ಕೆ ಯಾವ ಶಿಕ್ಷೆ ಎಂಬುದು ನಿರ್ಧಾರವಾಗಿರುತ್ತಿತ್ತೆಂದು ತಿಳಿಯಬಹುದಾಗಿದೆ. ಕಾರಣ ಕೆಲವು ಅಪರಾಧಕ್ಕೆ ಅದೇ ರೀತಿಯ ಶಿಕ್ಷೆಯನ್ನೇ ಎಲ್ಲಾ ಕಾಲಕ್ಕೂ ಕೊಟ್ಟದ್ದನ್ನು ಕಾಣಬಹುದು. ಅದನ್ನು ಕಾರ್ಯಗತಗೊಳಿಸುವಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು.

ಕಳ್ಳರಿಗೆ, ಅಪರಾಧಿಗಳಿಗೆ ರಾಜನು ಹಿಂಜರಿಯದೇ ದಾಕ್ಷಿಣ್ಯಕ್ಕೊಳಗಾಗದೇ ಅಂತಿಮವಾಗಿ ಮರಣ ದಂಡನೆಯಲ್ಲದೇ ಅನೇಕ ಬಗೆಯ ಶಿಕ್ಷೆಗಳನ್ನು ಕೊಡುತ್ತಲಿದ್ದ ಉಲ್ಲೇಖಗಳು ಕಾವ್ಯಗಳಲ್ಲಿ ಕಂಡುಬರುತ್ತವೆ.

ಜೈನ ಕಾವ್ಯಗಳ ತಾತ್ವಕತೆಯ ಹಿನ್ನೆಲೆಯಲ್ಲಿ ಪ್ರಪಂಚ–ಭಾರತ–ಕನ್ನಡ ಸಂದರ್ಭದಲ್ಲಿ ಪ್ರಚಲಿತವಾಗಿರುವ ಶಿಕ್ಷೆಗಳನ್ನು ಮುಖ್ಯವಾಗಿ ಎರಡು– 'ವಾಸ್ತವ' ಹಾಗೂ 'ಅತೀತ' ಎಂಬುದಾಗಿ ವಿಭಜಿಸಿಕೊಳ್ಳಬಹುದು. 'ವಾಸ್ತವ'ದ ಶಿಕ್ಷೆಗಳನ್ನು ಪ್ರಪಂಚದೊಳಗಿನ ಯಾವುದೇ ಪ್ರಭಲಶಕ್ತಿ–ರಾಜ, ನ್ಯಾಯಾಂಗ, ಆಡಳಿತ, ವ್ಯಕ್ತಿ – ಈ ಯಾವುದೋ ಒಂದು ವಿಧಿಸಬಹುದಾದದ್ದು. ಇನ್ನು ಯಾವುದೋ ಒಂದು ದಿವ್ಯ ಶಕ್ತಿ, ದೈವ, ಧರ್ಮ, ಧರ್ಮದ ಹೆಸರಿನಲ್ಲಿ ತನಗೆ ತಾನೇ ವಿಧಿಸಿಕೊಳ್ಳಬಹುದಾದ್ದು 'ಅತೀತ' ದಂಡನೆ.

ಇಲ್ಲಿ ವಾಸ್ತವದ ದಂಡನೆಗಳನ್ನು ಪ್ರಮುಖವಾಗಿ ಮೂರು ಪ್ರಕಾರಗಳಲ್ಲಿ ವಿಂಗಡಿಸಿಕೊಳ್ಳಬಹುದಾಗಿದೆ.

1. **ಅರ್ಥ ದಂಡ ಶಿಕ್ಷೆ**
2. **ಧಿಕ್ಕಾರ ದಂಡ ಶಿಕ್ಷೆ – ಅ) ಗಡಿಪಾರು ಆ) ಸೆರೆವಾಸ**
3. **ವಧಾ ದಂಡ ಶಿಕ್ಷೆ – ಅ) ಅಂಗಚ್ಛೇದನ ಆ) ಮರಣದಂಡನೆ**

ಈ ವಿಂಗಡನಾ ಕ್ರಮದಲ್ಲಿಯೇ ಜೈನ ಚಂಪೂ ಕಾವ್ಯಗಳಲ್ಲಿನ ಶಿಕ್ಷೆಗಳ ಉಲ್ಲೇಖಗಳನ್ನು ನಾವಿಲ್ಲಿ ಪರಿಶಿಲಿಸಬಹುದು.

### 1. ಅರ್ಥದಂಡ ಶಿಕ್ಷೆ :

ಅಪರಾಧಿಗೆ ಹಣ ಅಥವಾ ವಿತ್ತರೂಪದ ದಂಡವನ್ನು ವಿಧಿಸುವ ಪದ್ಧತಿ ರೂಢಿಯಲ್ಲಿದ್ದು, ಅಂಥ ದಂಡದ ವಿತ್ತವು ರಾಜ್ಯದ ಬೊಕ್ಕಸಕ್ಕೆ ಸೇರುತ್ತಿದ್ದು, ಅದನ್ನು ದೇವಾಲಯ, ಕೆರೆ ನಿರ್ಮಾಣ ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಬಳಸುತ್ತಿದ್ದ ನಿದರ್ಶನ ಶಾಸನಗಳಲ್ಲಿವೆ.

ಅಪರಾಧಿಯ ಅಪರಾಧಕ್ಕನುಗುಣವಾಗಿ ವಿಧಿಸುತ್ತಿದ್ದ ದಂಡನೆಯಲ್ಲಿ ಕೆಲವೊಮ್ಮೆ ಅಪರಾಧಿಗೆ ದಂಡ ಹಾಕುವ ಮೂಲಕವೋ, ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವ ಮೂಲಕವೋ ಆತನನ್ನು ಆರ್ಥಿಕವಾಗಿ ನಷ್ಟಗೊಳಿಸುತ್ತಿದ್ದರು. ಅಂಥ ಕೆಲವು ಉಲ್ಲೇಖಗಳನ್ನು ಸಾಹಿತ್ಯದಲ್ಲಿ ಕಾಣಬಹುದು. ಪಂಪನ 'ಬಡಿದ ಕಾರಣಂ ಕೊಂಡೊಯ್ವರ್ ವಡೆಪುಗಿಡುವಿನೆಗಮ್'[1] ಎಂಬ ಮಾತು ಅಪರಾಧಿಯ ಆಸ್ತಿಯನ್ನೆಲ್ಲ ವಶಪಡಿಸಿಕೊಳ್ಳತ್ತಿದ್ದರೆಂಬುದನ್ನು ಹೇಳುತ್ತದೆ. 'ವಿದ್ಯುದ್ವೇಗನೆಂಬ ಕಳ್ಳನಂ ಹಿಡಿದುಳ್ಳದೆಲ್ಲಮಂ ಕೊಂಡು ಮತ್ತಮಿರ್ದೊಡೆಮೆಯಂ ತೋರೆಂದು ರಾಜಪುರುಷರ್ ನಿಗ್ರಹಿಸಿದುದನ್ನು ಚಾವುಂಡರಾಯ[2] ಉಲ್ಲೇಖಿಸುತ್ತಾನೆ. ನಯಸೇನನ 'ತಂತಮ್ಮ ಮೇರೆಯಂ ತಪ್ಪಿದೊಡೆ ದಂಡಮಂ ಕೊಳ್ವ ಭೂಪಾಲರ' ಹಾಗೂ 'ದ್ರೋಹರಪ್ಪವರಂ ಕವರ್ವಂತೆ ತಕ್ಕರನೇಕ ಕವರ್ವರ್'[3] ಎಂಬ ಮಾತುಗಳು ಅರ್ಥ ದಂಡ ಅಥವಾ ಆಸ್ತಿ ವಶಪಡಿಸಿಕೊಳ್ಳುವ ಶಿಕ್ಷೆಗೆ ನಿದರ್ಶನಗಳಾಗಿವೆ.

### 2. ಧಿಕ್ಕಾರ ದಂಡ ಶಿಕ್ಷೆ :

ಅಪರಾಧಿಯನ್ನು ಸಮಾಜದಿಂದ ನಿರಂತರವಾಗಿ ಇಲ್ಲವೆ ನಿರ್ಧಿಷ್ಪ ಅವಧಿಯವರೆಗೆ ಬೇರ್ಪಡಿಸುವುದೇ ಧಿಕ್ಕಾರ ದಂಡ ಶಿಕ್ಷೆ. ಈ ಧಿಕ್ಕಾರ ದಂಡವನ್ನು ಗಡಿಪಾರು ಶಿಕ್ಷೆ, ಸೆರೆವಾಸ ಶಿಕ್ಷೆ ಎಂದು ಎರಡು ರೀತಿ ಗುರುತಿಸಬಹುದು.

**ಅ) ಗಡಿಪಾರು ಶಿಕ್ಷೆ:**

ಅಪರಾಧಿಯನ್ನು ತಾನಿದ್ದ ಸಮಾಜದಿಂದ ಬೇರ್ಪಡಿಸುವುದು ಇದರ ಮುಖ್ಯ ಉದ್ದೇಶ. ರಾಜನಾದವನು ತನ್ನ ರಾಜ್ಯದಿಂದ ಅಪರಾಧಿಯನ್ನು ಹೊರಹಾಕುವುದೇ ಗಡಿಪಾರಿನ ದಂಡನೆಯಾಗಿದೆ. ಚಂಪೂ ಸಾಹಿತ್ಯೋಕ್ತ ದಂಡನೆಗಳನ್ನಿಲ್ಲಿ ನೋಡಬಹುದು.

---

[1] ಆದಿಪುರಾಣ: ಆ.5, ಪ.20, ಪು.224

[2] ಚಾವುಂಡರಾಯ ಪುರಾಣ: ಪು. 80

[3] ಧರ್ಮಾಮೃತ: ಆ.7, ಪ.43ವ, ಪು.434 ; ಅದೇ; ಆ.9 ಪ.68ವ, ಪು.598

ಕರ್ಣಪಾರ್ಯನ ನೇಮಿನಾಥ ಪುರಾಣದಲ್ಲಿಯ ಕಳ್ಳನಾದ ರುದ್ರದತ್ತನು ಕಳ್ಳತನ ಮಾಡಿ ಅರಸನ ತಳವಾರನಾದ ಸೇನಕನೆಂಬವನ ಕೈಯ್ಯಲ್ಲಿ ಸಿಕ್ಕಿಬಿದ್ದಿದ್ದಾಗ ಆತನಿಗೆ ಮರಣದಂಡನೆ ವಿಧಿಸಲು ಕರೆದೊಯ್ಯುತ್ತಾನೆ. ಆದರೆ ಕಳ್ಳನು ಬ್ರಾಹ್ಮಣನೆಂದು ತಿಳಿದು ಆತನಿಗೆ ಗಡಿಪಾರಿನ ಶಿಕ್ಷೆ ವಿಧಿಸುತ್ತಾನೆ. ಈ ಶಿಕ್ಷೆಯನ್ನು ಉಲ್ಲಂಗಿಸಿದರೆ ಅಂದರೆ ಊರಲ್ಲಿ ಮರಳಿ ಕಂಡರೆ ಕೊಲ್ಲುವುದಾಗಿ ಎಚ್ಚರಿಕೆ ಕೊಡುತ್ತಾನೆ.[4]

ಚಾವುಂಡರಾಯ ಪುರಾಣದ ನೇಮಿ ಪುರಾಣಂ ಭಾಗದಲ್ಲಿ '.... ಅಲ್ಲಿ ಸುರೇಂದ್ರದತ್ತನೆಂಬ ಪರದಂ ಸಕಳಾಗಮ ಪಾರಗಂ ಸದ್ಧರ್ಮವತ್ಸಳಂ ನಿತ್ಯಪೂಜೆಯೊಳ್ಪತ್ತಷ್ಟಮಿಯೊಳಿಪ್ಪತ್ತಮವಾಸ್ಯೆಯೊಳ್ ನಾಲ್ವತ್ತು ಪುಣ್ಣಮಿಯೊಳ್ ಎಣ್ಬತ್ತುಯೆಯ್ದು ಗದ್ಯಾಣ ಪುನ್ನನರ್ಹತ್ಪೂಜೆಗಂ ಪಾತ್ರದಾನಕ್ಕಂ ಕೊಟ್ಟು ಶೀಲೋಪವಾಸಂಗಳೊಳ್ ನೆಗಳ್ದು ಧರ್ಮಪರನೆಂದೆಲ್ಲರ್ಗಂ ಸುತ್ಯನಾಗಿರ್ದೊಂದು ದಿವಸಂ ಪರದು ಪೋಗಲ್ ಬಗೆದು ತನ್ನ ಕೆಳೆಯಂ ರುದ್ರದತ್ತನೆಂಬ ಪಾರ್ವನಂ ಕರೆದು ದೇವ ಪೂಜಾವ್ಯಯಕ್ಕೆ ಪನ್ನೆರಡು ವರ್ಷದ ಪೊನ್ನಂ ಕೊಟ್ಟೆನ್ನ ಬರ್ಪನ್ನೆಗಂ ಅರ್ಹತ್ಪೂಜೆಗಂ ಪಾತ್ರದಾನಕ್ಕಂ ಮಾಳ್ಪುದೆಂದು ಪೋದೊಡಾ ಪಾರ್ವನು ಸ್ತ್ರೀ ದೂತ ವ್ಯಸನಾದಿಗಳಿನಾ ಪೊನ್ನನೆಲ್ಲಮಂ ತವಿಸಿ ಕಳಲ್ತುಗುಳ್ದಡೊಂದು ದಿವಮರಸನ ತಳಾರಂ ಸೇನಕನೆಂಬೊನಿರುಳ್ ಕಂಡು ನಿನ್ನಂ ಬ್ರಾಹ್ಮಣನಾಗಿರ್ದೊಮ್ಮೆಗಂ ಕೊಲ್ವೆನಲ್ಲೆನೀ ಪುರದಿಂ ಪೊರಮಟ್ಟು ಪೋಗು. ನಿನ್ನನಿನ್ನೆಲ್ಲಿ ಕಂಡೊಡಂ ಕೊಲ್ವೆನ್.....'[5]

ಈ ಮೇಲಿನೆರಡು ಪ್ರಸಂಗಗಳಿಂದ ತಿಳಿಯುವಂತೆ ಕಳ್ಳತನದ ಅಪರಾಧ ಖಚಿತಗೊಂಡರೆ ಮರಣದಂಡನೆಯಂತಹ ಶಿಕ್ಷೆ ಕೊಡುವ ಅಧಿಕಾರ ತಳವಾರನಿಗೆ ಇದ್ದಿತೆಂಬುದು ತಿಳಿಸುತ್ತದೆ. ಆದರೆ ಬ್ರಾಹ್ಮಣನಾದವನು ಮರಣದಂಡನೆ ವಿಧಿಸಬಹುದಾದ ಅಪರಾಧ ಮಾಡಿದ್ದರೂ ಆತ ಬ್ರಾಹ್ಮಣನೆಂಬ ಒಂದೇ ಕಾರಣಕ್ಕೆ ಮರಣದಂಡನೆಯಿಂದ ವಿನಾಯಿತಿ ಕೊಟ್ಟು ಗಡಿಪಾರಿನ ಶಿಕ್ಷೆ ಕೊಡುತ್ತಲಿದ್ದ ಸಂಗತಿ ತಿಳಿಯುತ್ತದೆ. ಅಂತಿಮವಾಗಿ ಅದು ರಾಜಾಜ್ಞೆಯೇ ಆಗಿದ್ದು, ರಾಜಾಜ್ಞೆ ಮೀರಿ ಊರಲ್ಲಿ ಮತ್ತೆ ಕಾಣಿಸಿಕೊಂಡರೆ ಬ್ರಾಹ್ಮಣನಿಗೂ ಮರಣದಂಡನೆಯ ಶಿಕ್ಷೆ ಇತ್ತೆಂಬುದನ್ನು ತಿಳಿಯಬಹುದು.

ನಯಸೇನನ ಧರ್ಮಾಮೃತದಲ್ಲಿಯೂ ಕಳ್ಳತನ ಮುಂತಾದ ಅಪರಾಧಗಳ ಬಗ್ಗೆ ವಿವರಿಸಿ, ಅದಕ್ಕೆ ಕಾರಣ, ದಂಡನೆ ಇತ್ಯಾದಿ ಸಂಗತಿಗಳನ್ನು ಕುರಿತು ಹೇಳಲಾಗಿದೆ. ಅಲ್ಲಿ ಬರುವ ಲಲಿತಾಂಗನ ಕಥೆಯಲ್ಲಿ ರಾಜನ ಮಗನೊಬ್ಬ ಕಳ್ಳತನಕ್ಕೆ ಇಳಿದ, ಅದಕ್ಕಾಗಿ ಜನರು ರಾಜನಿಗೆ ದೂರು ಕೊಡುವ, ಈ ಕುರಿತ ರಾಜನ ವಿಚಾರಣೆ ಹಾಗೂ ದಂಡನೆಯ ವಿವರಗಳನ್ನು ಕಾಣಬಹುದಾಗಿದೆ.

ಇಲ್ಲಿ ಬರುವ ವಿಚಾರ ಹೀಗಿದೆ. ಕಳ್ಳತನದಿಂದ ಜನರಿಗಾಗುವ ತೊಂದರೆ, ಜನರು ಬೇಸತ್ತು ರಾಜನಿಗೆ ದೂರು ಕೊಡುವುದು, ರಾಜನು ಮಗನಿಗೆ ಬುದ್ಧಿ ಹೇಳಿ ತಿದ್ದಲು ಪ್ರಯತ್ನಿಸುವುದು, ಕೊನೆಗೆ ಉಗ್ರ ಶಿಕ್ಷೆ ಕೊಡದೇ ಮಗನೆಂಬ ಮೋಹದಿಂದಾಗಿ ಗಡಿಪಾರಿನ ಶಿಕ್ಷೆಗೊಳಪಡಿಸುವುದು ತಿಳಿಯುತ್ತದೆ.[6]

ಇಲ್ಲಿಯೇ ಜಿನದತ್ತ ಮುನಿಗಳು ತಾವು ವಿದ್ಯೆ ಸಾಧಿಸಿದ ಬಗ್ಗೆ ಲಲಿತಾಂಗನ ಮುಂದೆ ಹೇಳುವಾಗ ಬರುವ ಕಥೆಯಲ್ಲಿಯೂ ಗಡಿಪಾರಿನ ಪ್ರಸಂಗ ಕಂಡು ಬರುತ್ತದೆ.

ಇಲ್ಲಿಯೂ ಕೂಡಾ ರಾಜಶ್ರೇಷ್ಠಿಯ ಮಗ ಧನ್ವಂತರಿ ಹಾಗೂ ರಾಜಪುರೋಹಿತನ ಮಗ ವಿಶ್ವಾನುಲೋಮರೆಂಬವರು ಮಿತ್ರರಾಗಿದ್ದು, ಕೆಟ್ಟವರ ಸಹವಾಸಕ್ಕೆ ಬಿದ್ದು ಇಬ್ಬರು ಗೆಳೆಯರು ಕಳ್ಳತನದ ದಾರಿ ಹಿಡಿಯುವುದು ತಿಳಿಯುತ್ತದೆ. ಅದನ್ನು ತಿಳಿದ ತಂದೆ ತಾಯಿಗಳು ತಿದ್ದಲು ಪ್ರಯತ್ನಿಸಿ ವಿಫಲರಾಗಿ ಕೊನೆಗೆ ರಾಜನ ಎದುರಿಗೆ ಆ ಮಕ್ಕಳನ್ನು ತೋರೆದಿರುವುದು ತಿಳಿದುಬರುತ್ತದೆ. ಆಗ ಅವರು ಮತ್ತೆ ಕಳ್ಳತನದಲ್ಲಿ ತೊಡಗಿ ರಾಜಮನೆತನದ ದಿವ್ಯ ರತ್ನಗಳನ್ನೇ ಕದಿಯುವಾಗ ತಳವಾರನ ಕೈಯ್ಯಲ್ಲಿ ಸಿಕ್ಕಿ ಬೀಳುತ್ತಾರೆ. ತಳವಾರನು ಅವರನ್ನು ರಾಜನಿಗೆ ಒಪ್ಪಿಸುತ್ತಾನೆ. ರಾಜನು ರಾಜಶ್ರೇಷ್ಠಿಯ, ರಾಜ ಪುರೋಹಿತನ ಮಗನೆಂಬ ಕಾರಣದಿಂದ ಮರಣ ದಂಡನೆ ಶಿಕ್ಷೆ ವಿಧಿಸದೇ ಗಡಿಪಾರಿನ ಶಿಕ್ಷೆ ವಿಧಿಸಿರುವುದನ್ನು, ಇನ್ನೊಮ್ಮೆ ಈ ರಾಜ್ಯದಲ್ಲಿ ಕಂಡರೆ ಕೊಲ್ಲಿಸುವುದಾಗಿ ಹೇಳಿರುವುದನ್ನು '..... ಕೊಲೆಯನೊರ್ಮೆಗೆ ಮಾಣ್ದೆಂ ನಿರುತಂ ನೀವೀರ್ವರುಮೀ.... ಪುರದಿಂ ಪೊರಮಟ್ಟು ಪೋಗಿಮಿರ್ದೊಡೆ ಕೊಲ್ವಂ' ಎಂಬಲ್ಲಿ ಗಮನಿಸಬಹುದು.[7] ಇಲ್ಲಿಯೂ ಬ್ರಾಹ್ಮಣರ ಮಕ್ಕಳಂತೆ ರಾಜಶ್ರೇಷ್ಠಿಗಳ ಮಕ್ಕಳಿಗೂ ಒಮ್ಮೆಲೇ ಮರಣದಂಡನೆ ಶಿಕ್ಷೆ ವಿಧಿಸದೇ ಗಡಿಪಾರಿನ ಶಿಕ್ಷೆ ವಿಧಿಸಿದ್ದನ್ನು ಕಾಣುತ್ತೇವೆ.

ಇದೇ ದಂಡನೆಯು ನೇಮಿನಾಥ ಪುರಾಣದಲ್ಲಿ ಹೀಗಿದೆ. ನಗರದ ಗಣ್ಯನು, ಸುತ್ಯನಾದ ಭಾನುದತ್ತನ ಮಕ್ಕಳು ಪಿತ್ರಾರ್ಜಿತವಾದ ಮಹಾಸಂಪತ್ತನ್ನೆಲ್ಲಾ ಹೀನವಾದ ವ್ಯಸನಗಳಲ್ಲಿ ಕಳೆದುಕೊಂಡು ಕಳ್ಳತನಕ್ಕೆ ತೊಡಗಿ ಕಳವು ಮಾಡಲಾಗಿ, ಆ ಊರಿನ ದೊರೆ ಅದನ್ನು ತಿಳಿದು ಅವರನ್ನು ಹಿಡಿದು ತರಿಸಿ '.... ಭಾನುದತ್ತನ ಪುತ್ರರ್ಕಳನೆಂತು ಕೊಲ್ವೆನೆಂದುಜ್ಜ್ವಳಮತಿ ಪೊರಮಡಿಸಿ ಕಳೆದನವರಂ ಪೊಳಲಿಂ'[8] ಎನ್ನುವಲ್ಲಿ ಅಪರಾಧಿಯು ಗಣ್ಯನೂ ಸುತ್ಯನೂ ಆದ ಭಾನುದತ್ತನ ಮಗ ಎಂಬ ಕಾರಣಕ್ಕಾಗಿ ಅಪರಾಧಿಗಳಿಗೆ ವಿಧಿಸುವಂತೆ ಮರಣದಂಡನೆ ವಿಧಿಸದೇ ಗಡಿಪಾರಿನ ಶಿಕ್ಷೆ ವಿಧಿಸಿದ್ದು ತಿಳಿದುಬರುತ್ತದೆ.

**ವಧಾ ದಂಡ ಶಿಕ್ಷೆ**

**ಅ) ಅಂಗಚ್ಛೇದನ :**

ಪ್ರಾಚೀನ ಕಾಲದಲ್ಲಿ ಕೆಲವು ಅದರಾಧಗಳಿಗೆ ಮರಣದಂಡನೆಗೆ ಬದಲಾಗಿ ಕೇವಲ ಅಪರಾಧಿಯ ಅಂಗಚ್ಛೇಧನ ಮಾಡಿದ ಉಲ್ಲೇಖಗಳಿವೆ ಅವನ್ನಿಲ್ಲಿ ನೋಡಬಹುದು.

ಚಾವುಂಡರಾಯ ಪುರಾಣದ 'ಜಿನದೇವನ ಬಯಕೆಯಂ ಮರೆಯಿಸಿ ಪುಸಿ ನುಡಿದ ಧನದೇವನ ಜಿಹ್ವೋತ್ಪಾಟನಂಗೆಯ್ವುದುಮಂ', 'ಇರುಳ್ ಮರೆಯೊಳ್ ವಿವೇಕಮಿಲ್ಲದೆ ತನ್ನ ತಂಗೆಗಭಿಲಾಷೆಯಾದ ರಕ್ಷಕನೆಂಬಂಗಚ್ಚೇದಂ ಗೆಯ್ವುದುಮಂ', 'ಕ್ಷೇತ್ರಲೋಭದಿಂ ತಮ್ಮಣ್ಣನಂ ಪಿಡಿದು ಕೊಂದ ಲೋಲನೆಂಬನಂ ಪುಯ್ಯಲಿಡೆ ನಾಲ್ಕಡಿಗಳೆವುದು', ಸಾನಂದಕನೆಂಬರಸನಭಯ ಘೋಷನೆಯಂ ಮಾಡಿದೊಡರಸನೆಳಗಮಂ ಕಳ್ದು ತಿಂದಂಕನೆಂಬೊಂಗೆ ಕರಚ್ಛೇದನಮಂ ಮಾಳ್ಪುದಮ್' ಎಂಬ ಉಲ್ಲೇಖಗಳಲ್ಲಿ ಸುಳ್ಳು ಹೇಳಿದ್ದಕ್ಕೆ ನಾಲಿಗೆಯನ್ನು, ತನ್ನ ತಂಗಿಯೊಂದಿಗೆ ವ್ಯಭಿಚಾರ ಮಾಡಿದ್ದಕ್ಕೆ ಮರ್ಮಾಂಗವನ್ನು, ಭೂಮಿಯ ಆಸೆಗಾಗಿ ತಮ್ಮನನ್ನು ಕೊಂದದ್ದಕ್ಕಾಗಿ ಕೈಕಾಲುಗಳನ್ನು, ಅರಸನ ಆಜ್ಞೆಯನ್ನು ಮೀರಿ ಕದ್ದು ತಿಂದದ್ದಕ್ಕೆ ಕೈಗಳನ್ನು ಕಡಿಯುವ ಮೂಲಕ ನಾನಾ ರೀತಿಯ ಅಂಗಚ್ಛೇಧನ ಮಾಡಿದ ಶಿಕ್ಷೆಯೊಂದಿಗೆ ಅಮೇಧ್ಯ ಉಣಿಸುವ ಸಂಕೋಲೆ ತೊಡಿಸುವ ಶಿಕ್ಷೆಗಳ ಪ್ರಸ್ತಾಪವಿದೆ.[9]

ನಯಸೇನನ ಧಮಾಮೃತದಲ್ಲಿ ಅನ್ಯಾಯಪರರಂ ಕಿಡಿಸುವಂತೆ, ಚಾರಿತ್ರಂಗೆಟ್ಟರ ನಾಳ್ಕಡಿಗಳೆವಂತೆ, ಪುಸಿದೊಡೆ ನಾಲಗೆಯಂ ಸೀಳ್ವ ಶಿಕ್ಷೆಗಳು ಉಲ್ಲೇಖಗೊಂಡಿವೆ.[10]

---

[4] ನೇಮಿನಾಥ ಪುರಾಣ ಸಂ.1: ಆ.3, ಪ.83–87ವ, ಪು.128–130

[5] ಚಾವುಂಡರಾಯ ಪುರಾಣಂ, ಎಂ. ವೆಂಕಟರಾವ್ ಮತ್ತು ಎಚ್. ಶೇಷಗಿರಯ್ಯ (ಸಂ) : ಪು.313

[6] ಧರ್ಮಾಮೃತ: ಆ.6, ಪ.7–153, ಪು.109–144

[7] ಧರ್ಮಾಮೃತ: ಆ.2, ಪ.161–167, ಪು. 148–150

[8] ನೇಮಿನಾಥ ಪುರಾಣ ಸಂ.1: ಆ.6, ಪ.20

[9] ಚಾವುಂಡರಾಯ ಪುರಾಣ: ಪು.79

[10] ಧರ್ಮಾಮೃತ: ಆ.7, ಪ.43ವ

ಇದಲ್ಲದೆ ಅಪರಾಧಿಯನ್ನು ನಿಗ್ರಹಿಸುವಲ್ಲಿ ಶಿಕ್ಷೆ ಒಂದು ಪ್ರಬಲ ಅಸ್ತ್ರ. ಅದನ್ನು ಅಪರಾಧದ ಮೊದಲ ಹಂತದಲ್ಲಿಯೇ ಜಾರಿಗೊಳಿಸುತ್ತಿರಬಹುದಾಗಿದೆ. ಅಂದರೆ ಕಳ್ಳನೆಂದು ಗೊತ್ತಾಗುತ್ತಿದ್ದಂತೆಯೇ ದಂಡಿಸಲು ತೊದಗುತ್ತಿದ್ದಂತೆ ಇದೆ. ಕಳ್ಳನು ತಪ್ಪಿಸಿಕೊಂಡು ಓಡಿ ಹೊಗುತ್ತಲಿದ್ದರೆ ಸೆರೆ ಹಿಡಿಯುವುದಕ್ಕಾಗಿ ಕಾಲುಗಳಿಗೆ ಶಕ್ತಿಗುಂದುವಂತೆ ಹೊಡೆಯುವುದು, ಚಿಕ್ಕ, ಚಿಕ್ಕ ದೊಣ್ಣೆಗಳಿಂದ ಕಾಲಿಗೆ ಪೆಟ್ಟನ್ನು ಕೊಡುವುದು, ಕೈಗೆ ಸಿಕ್ಕ ಮೇಲೆ ಕಡಿಕಂಡವಾಗುವಂತೆ ಬಾಸುಂಡೆಗಳೇಳುವಂತೆ ಕಳ್ಳನನ್ನು ಹೊಡೆಯುತ್ತಿದ್ದಿರಬಹುದಾಗಿದೆ.[11]

1. **ಆ) ಮರಣದಂಡನೆ**

ಅಪರಾಧಿಯನ್ನು ಪ್ರಾಣಹಾನಿಗೆ ಈಡು ಮಾಡುತ್ತಲಿದ್ದ ಹಾಗೂ ಪ್ರಾಚೀನ ಕಾಲದಲ್ಲಿ ಹೆಚ್ಚು ಪ್ರಚಲಿತದಲ್ಲಿದ್ದ ಶಿಕ್ಷೆ ಇದಾಗಿದೆ. ಪ್ರಾಚೀನ ಕರ್ನಾಟಕದಲ್ಲಿ ಕಳವು, ಕೊಲೆ, ಹಾದರ ಹೀಗೆ ಹೆಚ್ಚು ಕಡಿಮೆ ಎಲ್ಲ ಅಪರಾಧಗಳಿಗೂ ಮರಣದಂಡನೆಯೊಂದೇ ಏಕೈಕ ಹಾಗೂ ಪರಿಣಾಮಕಾರಿ ದಂಡನೆಯಾಗಿ ಕಂಡುಬಂದಿದೆ. ಈ ಮರಣದಂಡನೆಗಳು ಭಿನ್ನ ಭಿನ್ನ ಸ್ವರೂಪವಾಗಿದ್ದು ಅ) ಶೂಲಕ್ಕೆ ಹಾಕುವ ಆ) ಕಾಯ್ದ ಕಬ್ಬಿಣದ ಮೂರ್ತಿ ಅಪ್ಪಿಸುವ ಇ) ಎಳ್ಳಿನ ಗಾಣದಲ್ಲಿ ಹಾಕಿ ಹಿಂಡುವ ಈ) ಶೂಲದಿಂದ ತಲೆ ಕಡಿಯುವ ಈ ರೀತಿಯಾಗಿ ವಿಂಗಡಿಸಬಹುದು. ಅಂಥ ಕೆಲವನ್ನಿಲ್ಲಿ ನೋಡಬಹುದು.

ಪಂಪನ ಆದಿಪುರಾಣದಲ್ಲಿ ಲೋಲುಪನೆಂಬ ಮಿಠಾಯಿಗಾರನು ತನ್ನಂತೆ ಅನ್ಯಾಯ ಮಾರ್ಗದಲ್ಲಿ ನಡೆಯದ ತನ್ನ ಮಗನನ್ನು ಬಡಿಗೆಯಿಂದ ಹೊಡೆದು ಕೊಂದದ್ದಕ್ಕಾಗಿ ಅರಸನು ಮರಣದಂಡನೆ ಶಿಕ್ಷೆ ವಿಧಿಸುತ್ತಾನೆ. ಅಲ್ಲದೇ ಮರಣದಂಡನೆಗೊಳಗಾದ ಅಪರಾಧಿಯ ಎಲ್ಲ ವಸ್ತುಗಳನ್ನು ವಶಪಡಿಸಿಕೊಳ್ಳುವ ದಂಡನೆಯ ಬಗ್ಗೆ ಸೂಚನೆಯಿರುವುದನ್ನು ಈ ಕಥೆಯಲ್ಲಿ ಕಾಣಬಹುದು.[12]

ಪಂಪನ ಆದಿಪುರಾಣದಲ್ಲಿ ವಜ್ರಜಂಘನು ಮುನಿಗಳ ಹತ್ತಿರ ಬಂದು ತನ್ನ ಹಾಗೂ ತನ್ನ ಮಕ್ಕಳಾಗಿ ಹುಟ್ಟಲಿರುವ ಭರತ, ಬಾಹುಬಲಿ, ವೃಷಭಸೇನ, ಅನಂತವೀರ್ಯರ ವೃತ್ತಾಂತವನ್ನು ಕೇಳಿ ಕೊನೆಗೆ ಅಲ್ಲಿರುವ ಹುಲಿ, ಹಂದಿ ಕೋಡಗ ಹಾಗೂ ಮುಂಗಿಸಿಗಳ ಭವಾವಳಿಗಳನ್ನು ತಿಳಿಸಿ ಎಂದಾಗ ಗಗನಾಚಾರಣರು–

"ಈಹುಲಿ ಹಿಂದಿನ ಜನ್ಮದಲ್ಲಿ ಉಗ್ರಸೇನನು; ಕ್ರೋಧದಿಂದ ತಿರ್ಯಗಾಯುಷ್ಯ ಪಡೆದನು. ಅಂದು ಈತನು ಅರಸನ ಉಗ್ರಾಣದ ಸಾಮಗ್ರಿಗಳನ್ನು ಅಲ್ಲಿನ ರಕ್ಷಕರನ್ನು ವಂಚಿಸಿ ಕದ್ದು ಒಳಗೊಳಗೆ ಸುಳಿದಾಡುತ್ತಿದ್ದುದನ್ನರಿತ ರಾಜನು ಕಳ್ಳನನ್ನು ಹಿಡಿತರಿಸಿ ಕೆನ್ನೆಗೆ ಹೊಡೆದು, ಕಾಲಲೊದೆದು ಕೊಲ್ಲಿಸುತ್ತಾನೆ.[13] ಇಲ್ಲಿನ ಕಾಲೊದೆದು ಹಾಗೂ ಕೆನ್ನೆಗೆ ಹೊಡೆದು ಸಾಯಿಸುವ ಮರಣದಂಡನೆಯು ವಿಶಿಷ್ಟ ರೀತಿಯದಾಗಿದೆ.

ಚಾವುಂಡರಾ ಪುರಾಣದ ಆದಿಪುರಾಣದಲ್ಲಿ ಉಗ್ರಸೇನನೆಂಬುವನು ತಂದೆ ತಾಯಿಗಳ ಅನಾದಾರದಿಂದ ಕಳ್ಳನಾಗಿ ಮಾರ್ಪಟ್ಟು ಹಣವನ್ನು ಕದ್ದು ತಂದು ಸೂಳೆಯರಿಗೆ ಕೊಡುತ್ತಲಿದ್ದನು. ಅದನ್ನು ತಿಳಿದ ಅರಸನು ಹಿಡಿದು ತರಿಸಿ ಮರಣ ದಂಡನೆಯ ಶಿಕ್ಷೆ ಕೊಟ್ಟಿರುವ ಉಲ್ಲೇಖವಿದೆ.[14] ಅಂದರೆ ಸಾಮಾನ್ಯನಿಗೆ ಮರಣದಂಡನೆಯು ತಪ್ಪುತ್ತಿರಲಿಲ್ಲ ಎಂದಾಯಿತು.

ಚಾವುಂಡರಾಯ ಪುರಾಣದಲ್ಲಿಯ ಮರಣದಂಡನೆಯ ಕೆಲವು ಉಲ್ಲೇಖಗಳನ್ನಿಲ್ಲಿ ಗಮನಿಸಬಹುದು.

'ಸೆಟ್ಟಿಯ ಮಣಿಹಾರಮಂ ಕಳ್ದು ಸೂಳೆಗೆ ಕೊಟ್ಟ ರತಿಪಿಂಗಳನೆಂಬೊನಂ ಸೂಲದೊಳಿಕ್ಕುವುದುಂ', ಸಾಗರದತ್ತನೆಂಬನೊಳ್ ಜೂಜಾಡಿ ತನ್ನುಳ್ಳುದೆಲ್ಲಮಂ ಸೋಲ್ತು ಕುಡಲಿಲ್ಲದೆ ಸಮುದ್ರದತ್ತಂ ಸಾರಮೇಯ ಶಕೃದ್ಧೂಮಾಂತರ್ಗತನಾಗಿ ಬಿಸಿಲೊಳ್ ತೆಗೆದಿರ್ದುದುಮಂ ಒಂದು ಮಗುವನ್ನೆತ್ತಿಕೊಂಡು ಪೋಗಿ ಬಾಲ ತುಂಡಮಂ ಖಂಡಿಸಿಕೊಂಡು ಕೂಸುಂಕೊಂದು ಪೂಳ್ದು ಕಳ್ಗೆ ಕೊಟ್ಟು ಕುಡಿದ ಕಳ್ಗುಡಿಪಿಯ ಗೆಯ್ದ ಅಕೃತಮನಾಕೆಯ ಮಗನಿಂದಮರಿದು ಮುಳಿಸವಳ್ಗೆಮೊಳ್ಪ ನಿಗ್ರಹಮುಮಂ', 'ವಿದ್ಯುದ್ವೇಗನೆಂಬ ಕಳ್ಳನಂ ಹಿಡಿದುಳ್ಳಿದೆಲ್ಲಮಂ ಕೊಂಡು ಮತ್ತಮಿರ್ದೊಡೆಮೆಯಂ ತೋರೆಂದು ರಾಜಪುರುಷರ್ ನಿಗ್ರಹಿಸೆ ನಿಮ್ಮ ಪೆರ್ಗಡೆ ವಿಮತಿಯ ಕೆಯ್ಯೊಳ್ ಕೊಟ್ಟೆನೆನೆ ವಿಮತಿಯು ಕಟ್ಟುವೆತ್ತ ಕಳ್ಳನೆಲ್ಲಮುಮಂ ನುಡಿಗುಮೆನ್ನೊಳಂತಪ್ಪುದಿಲ್ಲೆಂಬುದುಮುಪಾಯಾಂತರದಿನಂಗಮನವನಲ್ಲಿ ಕಂಡು ಧರ್ಮಾಧಿಕರಣರ್ ಪೇಳ್ದ ತ್ರಿಕಂಸಪಾತ್ರೀ ಪ್ರಮಾಣ ಶಕೃದ್ಭಕ್ಷಣಂ ಮಲ್ಲರಿಂದಮಂ ತ್ರಿಂಶನ್ಮುಷ್ಟಿಪ್ರಹರಣಂ ಸರ್ವಸ್ವ ಹರಣಮೆಂಬ ದಂಡತ್ರಯಮುಮಂ ಮಾಡೆ ವಿಮತಿ ಬಾಳ್ವಾಸೆಯಿಂದೆಯ್ದಿ ಸತ್ತು ನರಕಕ್ಕೆ ಪೋದನಾ ವಿದ್ಯುಚ್ಚೋರನುಮನರಸಂ ಕೊಲ್ಲೆಂದು ತಳಾರಂಗೆ' ಹೇಳುತ್ತಾನೆ.[15] ಈ ಭಾಗದಲ್ಲಿ ಮರಣ ದಂಡನೆಯ ಉಲ್ಲೇಖವಿದೆ. ಇಲ್ಲಿ ಅಪರಾಧಿಗೆ ಮರಣದಂಡನೆ ವಿಧಿಸುವವ ಅರಸನಾದರೂ ಅದನ್ನು ಪೂರೈಸಿ ಕೊಲ್ಲುವವ ತಳಾರನಾಗಿದ್ದನೆಂದು ತಿಳಿಯಬಹುದಾಗಿದೆ.

ನಯಸೇನನ ಧಮಾಮೃತದಲ್ಲಿ ಕೊಡಲಿಯಿಂದ, ಗರಗಸದಿಂದ ಅಪರಾಧಿಯ ದೇಹದ ಸಂಧಿ ಸಂಧಿಯನ್ನು ಕತ್ತರಿಸುವ ಉಗ್ರರೂಪದ ದಂಡನೆಯ ಪ್ರಸ್ತಾಪವಿದೆ.[16]

ಇದೇ ಧರ್ಮಾಮೃತದಲ್ಲಿ ಪ್ರಭಾವತಿದೇವಿಯನ್ನು ತನ್ನವಳನ್ನಾಗಿಸಿಕೊಳ್ಳಲು ಮಾಳವ ರಾಜನಾದ ಚಂಡಪ್ರದ್ಯೋಯನು ಕಳಿಸಿದ ಹೆಗ್ಗಡೆಗೆ ಪ್ರಭಾವತಿ ದೇವಿಯು ಹೇಳುವ ಬುದ್ಧಿವಾದದಲ್ಲಿ ನೀಚ ಹಾದರವನ್ನು ಜನರೇ ಬೈಯ್ಯುತ್ತಾರೆ, ಹಿಡಿದು ಬಡಿಯುತ್ತಾರೆ, ಕುಪಿತರಾಗಿ ಕೊಲ್ಲುತ್ತಾರೆ, ಅದು ಕೊನೆಯಲ್ಲಿ ನರಕ ಪ್ರಾಪ್ತಿ ಎಂಬಲ್ಲಿ ಇಂಥ ಅಪರಾಧಕ್ಕೆ ಜನ, ಅರಸು, ಧರ್ಮ ಕೊಡಲಾಗಿತ್ತಿದ್ದ ಶಿಕ್ಷೆಗಳ ಸ್ವರೂಪ ವ್ಯಕ್ತವಾಗಿದೆ.[17]

ನೇಮಿನಾಥ ಪುರಾಣದಲ್ಲಿ ಬರುವ ಮನ್ಮಥನ ಕಥೆಯಲ್ಲಿ ಕಾಂಚನಮಾಲೆಯು ತನ್ನ ಮನಸ್ಸಿನಲ್ಲಿ ಆತನನ್ನು ಸೇರಬಯಸಿ ಆತನಿಗೆ ತನ್ನ ಅಪೇಕ್ಷೆ ತಿಳಿಸುತ್ತಾಳೆ. ಮನ್ಮಥನು ಅದನ್ನು ವಿರೋಧಿಸಿ ತಾಯಿಯೊಂದಿಗೆ ಇಂಥ ವ್ಯಭಿಚಾರ ಸಲ್ಲದು ಇಂಥ ಮಾತನ್ನು ಆಡಬಾರದೆಂದಾಗ '.... ಕಾಮಾಗ್ನಿ ಕೋಪಾಗ್ನಿಯಿಂದ ಬೆಂದ ಕಾಂಚನಮಾಲೆ ಚಾಡಿ ಹೇಳಿದಾಗ ಮನ್ಮಥನು ಅಪರಾಧಿಯಲ್ಲದಿದ್ದರೂ ತಪ್ಪು ತಿಳುವಳಿಕೆಯಿಂದ ಅಪರಾಧಿ ಎಂದು ಭಾವಿಸಿದ ರಾಜನು ಮರಣ ದಂಡನೆ ವಿಧಿಸಲು ಮುಂದಾಗುತ್ತಾನೆ.[18]

ಪಂಪನ ಆದಿಪುರಾಣದ ಐದನೆಯ ಆಶ್ವಾಸದ ನರಕದ ವರ್ಣನೆಯಲ್ಲಿ ಪರಸ್ತ್ರೀಯರಲ್ಲಿ ಅತ್ಯಾಸಕ್ತಿ ಹೊಂದಿದವರಿಗೆ ಕಾದಕಬ್ಬಿಣದ ಹೆಣ್ಣು ಬೊಂಬೆಯನ್ನು ಅಪ್ಪಿಸುವರು ಎಂಬ ವಿಶಿಷ್ಟ ರೀತಿಯ ಮರಣದಂಡನೆಯ ಉಲ್ಲೇಖವಿದೆ.[19]

---

11 ಧರ್ಮಾಮೃತ: ಆ.6, ಪ.89–94, ಪು.390

12 ಆದಿಪುರಾಣ: ಆ.5, ಪ.18ವ–20ವ

13 ಆದಿಪುರಾಣ: ಆ.5, ಪ.15–16

14 ಚಾವುಂರಾಯ ಪುರಾಣ: ಪು.33

15 ಚಾವುಂರಾಯ ಪುರಾಣ: ಪು.79–80

16 ಧರ್ಮಾಮೃತ: ಆ.6, ಪ.113, ಪು.396

17 ಧರ್ಮಾಮೃತ: ಆ.4, ಪ.226, ಪು.285

18 ನೇಮಿನಾಥ ಪುರಾಣ ಸಂ–1: ಆ.7, ಪ.150ವ–152ವ, ಪು.403

19 ಆದಿಪುರಾಣ: ಆ.5, ಪ.87, ಪು.248

ಧರ್ಮಾಮೃತದ 'ಕಳ್ಳರಪ್ಪಂ ಕೊಲ್ವಂತೆ', 'ಕೊಂದರಂ ಕೊಲ್ವಂತೆ', 'ದ್ರೋಹರಪ್ಪವರಂ ಕವರ್ವಂತೆ', 'ಕಳ್ದೊಡೆ ಶೂಲದೊಳಿಕ್ಕುವ', 'ಪೆರರಪೆಂಡಿರ್ಗಳಿಪಿದೊಡೆ ತಲೆಯನರಿವ' ಎನ್ನುವಲ್ಲಿ ಮರಣ ದಂಡನೆ, ಶೂಲದಂಡನೆ, ಕವರ್ವ (ದೋಚುವ) ದಂಡನೆಗಳ ಪ್ರಸ್ತಾಪ ಮಾಡಿದೆ.[20]

ಅತೀತ ದಂಡನೆಗಳಲ್ಲಿ 'ದಿವ್ಯ'ಗಳು ಬರುತ್ತಿದ್ದು ಅಪರಾಧಕ್ಕೆ ನಿರ್ದಿಷ್ಟ ಸಾಕ್ಷಿಗಳು ಸಿಗದಿದ್ದಾಗ ಅವುಗಳನ್ನು ಧರ್ಮದ ಹೆಸರಿನಲ್ಲಿ ದೇವಸ್ಥಾನಗಳ ಎದುರಿಗೆ ಮಾಡುತ್ತಲಿದ್ದರು. ಅವನ್ನಿಲ್ಲಿ ನಾನು ಉಲ್ಲೇಕಿಸಲು ಹೋಗಿರುವುದಿಲ್ಲ.

ಒಟ್ಟಾರೆಯಾಗಿ ಈ ರೀತಿಯಾಗಿ ಜೈನ ಚಂಪೂ ಕಾವ್ಯಗಳನ್ನು ತಾತ್ವಕತೆಯ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಮೇಲಿನ ರೀತಿಯ ನ್ಯಾಯ ಮತ್ತು ಶಿಕ್ಷಾ ಪದ್ಧತಿಗಳು ಕಾಣದೊರೆಯುತ್ತವೆ.

[20] ಧರ್ಮಾಮೃತ: ಆ.7, ಪ.43, ಪು.442; ಅದೇ: ಆ.9, ಪ.68, ಪು. 598